ಯಾರಿಗೂ ತಿಳಿದಂತಾಗುತ್ತಿದ್ದಿಲ್ಲ ಅನ್ನುವ ಮಾತೇ ಬೇರೇ. 'on life' ಅಥವಾ ಇದೇ ತರಹದ ಯಾವುದೋ ವಿಷಯದ ಬಗ್ಗೆ ನಂತರ ಒಮ್ಮೆ ಕಾಲೇಜಿನಲ್ಲಿದ್ದಾಗ ಭಾಷಣ ಸ್ಪರ್ಧೆ ಇತ್ತು. ಬೇರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಭಾಗೃಹ ಕಿಕ್ಕಿರಿದು ತುಂಬಿತ್ತು. ಯಾರೇ ಮಾತನಾಡಿದರೂ ರತ್ನಾಕರನಿಗೆ, ಅವನ ಗೆಳೆಯರಿಗೆ 'ಏನ ಫ್ಯಾಂಟಾಂಸ್ಟಿಕ್ ಮಾತನಾಡತಾನವಾ ಎಂದು ಅನಿಸುತ್ತಿತ್ತು. ಒಬ್ಬೊಬ್ಬ ವಿದ್ಯಾರ್ಥಿ ಭಾಷಣ ಮಾಡಿ ಮುಗಿಸಿದ ಮೇಲೆ 'ಫಸ್ಟ್ ಪ್ರಾಯಿಜ್' ಇವನಿಗೇ ಅನಿಸುತ್ತಿತ್ತು. ವಸಂತ ಅದೇ ಕಾಲೇಜಿನವನಾದ್ದರಿಂದ ಅವನ ನಂಬರು ಅದೇ ಕೊನೆಯದಾಗಿತ್ತು. ತಮ್ಮ ಕಾಲೇಜಿನವನೇ ಅನ್ನುವ ಅಭಿಮಾನದಿಂದ ಅವನ ಹೆಸರು ಘೋಷಿಸಿದ ಕೂಡಲೇ ಚಪ್ಪಾಳೆಗಳ ಸುರಿಮಳೆಯಾದಂತಾಗಿತ್ತು. ವಸಂತ ಎದ್ದು ಮಾಯಿಕ ಎದುರು ಬಂದು, ನಿಮಿಷ ಇಡೀ ಸಭಾಗೃಹ ಅವಲೋಕಿಸಿ ಭಾಷಣ ಪ್ರಾರಂಭ ಮಾಡಿದ್ದೇ ತಡ – ಎಲ್ಲರಲ್ಲೂ ವಿದ್ಯುತ್ ಸಂಚಾರ.

ಭಾಷಣ ಮುಗಿಸಿದ, ಎಷ್ಟೋ ಹೊತ್ತಿನವರೆಗೆ ಬೆಂಚು ಬಾರಿಸುವ ಸಪ್ಪಳದಿಂದ ಇಡೀ ಸಭಾಗೃಹ ಪ್ರತಿಧ್ವನಿಸುತ್ತಿತ್ತು. ಮೊದಲನೆಯ ಪುರಸ್ಕಾರ ವಸಂತನಿಗೆ ಸಿಕ್ಕಿದ್ದರ ಬಗ್ಗೆ ಯಾರಿಗೂ ಆಶ್ಚರ್ಯವಾಗಿರಲಿಲ್ಲ.

ಅವನ ಬಗ್ಗೆ ಈ ಪ್ರಸಂಗ ನೆನಪಾಗಿ ಬಹಳ ವಿಚಿತ್ರ ಅನಿಸಿತು. ಬದುಕಿನ ಬಗ್ಗೆ ಬಿ.ಎ.ದಲ್ಲಿ ಇದ್ದಾಗ ಇಷ್ಟು ಅದ್ಭುತವಾಗಿ ಮತ್ತು ಸುಂದರವಾಗಿ ಮಾತನಾಡಿದವನಿಗೇ ಬದುಕು ಬೇಡಾಗಿ ಹೋಯಿತಲ್ಲ, ಯಾಕಿರಬೇಕು? ಬದುಕುವದು ಮತ್ತು ಬದುಕಿನ ಬಗ್ಗೆ ಮಾತನಾಡುವದು ತೀರ ಒಂದಕ್ಕೊಂದು ವಿರುದ್ಧವೇ ಹಾಗಾದರೆ? ಅಥವಾ ಬದುಕಿನ ಬಗ್ಗೆ ಬರೆಯುವದು ಮತ್ತು ಬರೆದಂತೆ ಬದುಕುವದು ಬೇರೆ ಬೇರೆ ಇದ್ದಂತೆ ಇರಬೇಕು ಇದೂ ಕೂಡ.

ಎಲ್ಲರ ಸುಖದುಃಖಗಳಲ್ಲಿ ಪಾಲುಗಾರನಾಗಿ ಅವರ ಕಷ್ಟ– ಕಾರ್ಪಣ್ಯಗಳಿಗೆ ವಸಂತ ನೆರವಾಗುತ್ತಿದ್ದುದು ನೆಪವಾಗುತ್ತದೆ. ಮತ್ತು ಅಂಥ ಹೊತ್ತಿನಲ್ಲಿ 'ಏನು ಇಂಥಾ ಸಣ್ಣ ಪುಟ್ಟ ಪ್ರಸಂಗದಾಗ ಈ ಥರಾ ಮುಖ ಮಾಡ್ತೀರಿ? ಧೈರ್ಯ ಬೇಕಪಾ.' ಎಂದು ಹೇಳುವವನ ಧೈರ್ಯವೇ ಹೇಗೆ ನಷ್ಟವಾಗಿ ಹೋಗಿತ್ತೋ ಯಾರಿಗೆ ಗೊತ್ತು? ಯಾರಿಗೆ ಗೊತ್ತು ಎಂದು ಅನ್ನುವುದೂ ಎಲ್ಲರೂ ತಮ್ಮ ತಮ್ಮ ಹೊಣೆಗಾರಿಕೆ ಹಾರಿಸಿಕೊಳ್ಳುವದಕ್ಕಾಗಿ ಆಡುವ ಮಾತು. ಯಾಕೆಂದರೆ ಯಾರೂ ಗೊತ್ತುಮಾಡಿಕೊಳ್ಳಲಿಕ್ಕೆ ಹೋಗಲೇ ಇಲ್ಲ. ಮತ್ತು ಗೊತ್ತಾದವರು ತಮಗೆ ಗೊತ್ತಿದೆ ಎಂದು ಹೇಳಲೇ ಇಲ್ಲ.

ಆದರೂ ನಡುವೆ ಒಮ್ಮೆ ಅನಂತ ಭೇಟ್ಟಿಯಾದಾಗ ವಸಂತ ಭೇಟ್ಟಿಯಾದದ್ದರ ಬಗ್ಗೆ ಹೇಳಿದ್ದ: ಬೆಂಗಳೂರಿನ ನೋಕರಿ ಬಿಟ್ಟು (ಬಿಟ್ಟಿದ್ದನೋ ಅಥವಾ ತೆಗೆದಿದ್ದರೋ ಗೊತ್ತಿಲ್ಲ ಅಂದಿದ್ದರೂ ಬಹುತೇಕ ನೋಕರಿಯಿಂದ ತೆಗೆದಿರಬೇಕು ಅನ್ನುವ ಸಂಶಯ ಬರುವಂತೆ ಮಾತನಾಡಿದ್ದ) ಹರಿಹರದಲ್ಲಿ ಯಾವುದೋ ಸಣ್ಣ ಪುಸ್ತಕದ ಅಂಗಡಿ ಹಾಕಿದ್ದಾನೆ ಎಂದು. ಮುಂದೆ ಹರಿಹರದಿಂದ ಖರ್ಡಿಗೆ ಹೇಗೆ ಹೋದ? ಯಾಕೆ ಹೋದ?

ಹಾಂ : ಹೌದು. ನೆನಪಾಯ್ತು ಪ್ರಭಾಕರನ ಮದುವೆಗೆ ಎಲ್ಲ ಗೆಳೆಯರು ಒಟ್ಟಾದಾಗ ಬಾರದೇ ಉಳಿದವ ವಸಂತ ಮಾತ್ರ. ರಾತ್ರಿ ಶ್ರೀಮಂತ ಪೂಜೆಯ ಹೊತ್ತಿಗೆ ಎಲ್ಲರೂ ಮಾತನಾಡುತ್ತ ಕುಳಿತಾಗ ವಸಂತನ ವಿಷಯ ಬಂದಿತ್ತು. ವರಪೂಜೆಯ ಹೊತ್ತಿಗೆ ಮುದುಕ